ಅ) ಧಾರವಾಡ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಹವಾಮಾನ ವೈಪರೀತ್ಯದಿಂದಾಗಿ ಹಾಗೂ ಮೇವುಗಳ ಲಭ್ಯತೆಯಲ್ಲಿ ಕೊರತೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆ 2 ಜಿಲ್ಲೆಗಳನ್ನು ಒಂದೇ ಮಿಲ್ಕ್ ಫೆಡರೇಷನ್ ಅಡಿಯಲ್ಲಿ ಸೇರಿಸಲು ಕಾರಣಗಳೇನು?

ಇ) ಉತ್ತರ ಕನ್ನಡ ಜಿಲ್ಲೆಗೆ ಬೇರೆ ಫೆಡರೇಷನ್ ಮಾಡಿದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿನ ಹಾಲು ಉತ್ಪಾದನೆಯಾಗಿ ರೈತರಿಗೆ ಹೆಚ್ಚಿನ ಅನುಕೂಲವಾಗುವುದೆಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಕುಮಟಾ ಹಾಗು ಸಿಸಿಗಳಲ್ಲಿ ಮಾಡಿರುವ ಶೀತಲೀಕರಣ ಘಟಕ ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡಲು ಸಾಧ್ಯವಾಗದೇ ನಷ್ಟವನ್ನು ಅನುಭವಿಸುತ್ತದೆಂಬ ವಿಷಯ ಸರ್ಕಾರವು ಗಮನಿಸಿದೆಯೇ?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :—

ಅ) ಹೌದು.

ಆ) ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರತ್ಯೇಕವಾಗಿ ಹಾಲಿನ ಒಕ್ಕೂಟಗಳನ್ನು ರಚಿಸಿದರೆ ಅವು ಆರ್ಥಿಕವಾಗಿ ಬೆಳೆದು ಅಭಿವೃದ್ಧಿ ಹೊಂದುವ ಸಾಧ್ಯತೆಗಳು ಕಡಿಮೆ ಇರುವುದರಿಂದ 2 ಜಿಲ್ಲೆಗಳು ಸೇರಿದಂತೆ ಒಂದು ಒಕ್ಕೂಟವನ್ನು ರಚಿಸಲಾಗಿದೆ.

ಇ) ಮೇಲೆ ತಿಳಿಸಲಾದಂತೆ ಜಿಲ್ಲಾ ಒಕ್ಕೂಟಗಳ ಅಭಿವೃದ್ಧಿ ಸಾಧ್ಯತೆಯನ್ನು ಗಮನಿಸಬೇಕಾಗುತ್ತದೆ.

ಈ) ಹೌದು. ನಷ್ಟ ಸಂಭವಿಸಲು ಸಾಕಷ್ಟು ಪ್ರಮಾಣದಲ್ಲಿ ಜಿಲ್ಲೆಯಲ್ಲಿ ಹಾಲು ಉತ್ಪಾದನೆ ಆಗದೆ ಇರುವುದು ಕಾರಣವಾಗಿದೆ.

ನಿಗಧಿಪಡಿಸಿದ ಹಾಲಿನ ದರಗಳು.

1601(2268) ಡಾ: ಎಂ.ಪಿ ಕರ್ಕಿ (ಕುಮಟಾ) :— ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೇಂದ್ರ ಮಿಲ್ಕ್ ಫೆಡರೇಷನ್ ಅಥವಾ ಸರ್ಕಾರ ಬೇರೆ ಬೇರೆ ಮಿಲ್ಕ್ ಫೆಡರೇಷನ್‌ಗಳಲ್ಲಿ ಒಂದು ಲೀಟರ್ ಹಾಲಿಗೆ ನಿಗಧಿಪಡಿಸಿದ ದರ ಎಷ್ಟು?

ಆ) ಈ ದರವನ್ನು ಯಾವ ಆಧಾರದ ಮೇಲೆ ನಿಗಧಿಪಡಿಸಲಾಗಿದೆ.

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತವಿರುವ ಹಾಲಿನ ದರಕ್ಕೂ ಫೇಡರೇಷನ್ ನಿಗಧಿ ಮಾಡಿರುವ ದರಕ್ಕೂ 2-3 ರೂಗಳ ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು? ಇದನ್ನು ಸರಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :—

ಅ) ಕೇಂದ್ರ ಮಿಲ್ಕ್ ಫೇಡರೇಶನ್ ಆಗಲಿ ಅಥವಾ ಸರ್ಕಾರವಾಗಲಿ ಹಾಲಿನ ದರ ನಿಗಧಿ ಪಡಿಸುವುದಿಲ್ಲ. ಆಯಾ ಜಿಲ್ಲಾ ಹಾಲು ಒಕ್ಕೂಟಗಳೇ ಶೇಖರಣೆ ದರ ನಿಗಧಿಪಡಿಸುತ್ತವೆ.

ಆ) ಹಾಲು ಉತ್ಪಾದನಾ ವೆಚ್ಚ ಮತ್ತು ಸ್ಥಳೀಯ ಹಾಲು ಒಕ್ಕೂಟಗಳ ಆರ್ಥಿಕ ಪರಿಸ್ಥಿತಿಯ ಆಧಾರದ ಮೇಲೆ ಶೇಖರಣೆ ದರ ನಿಗಧಿ ಮಾಡಲಾಗುತ್ತಿದೆ.

ಇ) ಫೇಡರೇಷನ್ ಹಾಲಿನ ದರ ನಿಗಧಿಪಡಿಸುವುದಿಲ್ಲ. ಅದು ಜಿಲ್ಲೆಯಿಂದ ಜಿಲ್ಲೆಗೆ ವ್ಯತ್ಯಾಸವಾಗುತ್ತದೆ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಹೊನ್ನಾವರದಲ್ಲಿ ಸಿವಿಲ್ ಕೋರ್ಟ್ ಸ್ಥಾಪನೆ.

1602(2269) :— ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಹೊನ್ನಾವರದಲ್ಲಿ ಸಿವಿಲ್ ಕೋರ್ಟ್ ಸ್ಥಾಪನೆ ಕುರಿತು ಉಚ್ಚನ್ಯಾಯಾಲಯದಿಂದ ಪ್ರಸ್ತಾವನೆ ಬಂದಿದೆಯೇ?

2) ಹಾಗಿದ್ದಲ್ಲಿ ಇದನ್ನು ಅಧ್ಯತಾ ಪಟ್ಟಿಯಲ್ಲಿ ಸೇರಿಸಲು ಸರ್ಕಾರದವರು ಪರಿಶೀಲಿಸಿ ಕ್ರಮ ಕೈಗೊಳ್ಳುವರೇ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) :—

1) ಹೌದು

2) ಹೌದು. ಇದು ಸರ್ಕಾರದ ಪರಿಶೀಲನೆಯಲ್ಲಿದೆ.